**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.264/2019**

**(ಚಾ.ಸಾ.10/ಪ್ರಾ.ಸಾ.6)**

ತಾಃ 26-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮುನಿಯಪ್ಪ |
| ತಂದೆಯ ಹೆಸರು | ಲೇಟ್ ದಾಸಪ್ಪ |
| ವಯಸ್ಸು | 66 ವರ್ಷ |
| ಉದ್ಯೋಗ | ಸೊಸೈಟಿ ಕೆಲಸ |
| ವಾಸ ಸ್ಥಳ | ನಾಯಂಡಹಳ್ಳಿ, ಬೆಂಗಳೂರು |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

1. ಸಾಕ್ಷಿದಾರರು ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.4 ಹಾಗೂ ಸಾಕ್ಷಿದಾರರ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಗಿದೆ. ನಾನು ಆರೋಪಿಯನ್ನು ನೋಡಿರುತ್ತೇನೆ. ನನಗೆ ಚಾ.ಸಾ.2 ರವರ ಪರಿಚಯ ಇರುತ್ತದೆ. ಚಾ.ಸಾ.2 ಹಾಗೂ ಅವರ ಮನೆಯ ಪಕ್ಕದಲ್ಲಿರುವ ಚಾ.ಸಾ.1 ರವರ ಪರಿಚಯ ಇರುತ್ತದೆ. ದಿನಾಂಕ 25.12.2018 ರಂದು ಸೋಲದೇವನಹಳ್ಳಿ ಪೊಲೀಸರು ನಮ್ಮನ್ನು ಠಾಣೆಗೆ ಕರೆಸಿದ್ದರು. ಆ ಸಮಯದಲ್ಲಿ

ಆರೋಪಿ ಠಾಣೆಯಲ್ಲಿ ಇದ್ದರು. ಆರೋಪಿ ಚಾ.ಸಾ.2 ವನಜಾಕ್ಷಮ್ಮ ಇವರ ಕತ್ತನ್ನು ಕುಯ್ದು ಮಾಂಗಲ್ಯಸರವನ್ನು ಕಿತ್ತುಕೊಂಡು ಹೋಗಿದ್ದರು. ಆರೋಪಿ ಒಂದು ಡಿಯೋ ಸ್ಕೂಟರ್ ನಲ್ಲಿ ಇಟ್ಟಿದ್ದ ತನಗೆ ಸೇರಿದ ಒಂದು ಟೀ ಶರ್ಟು ಹಾಗೂ ಪ್ಯಾಂಟನ್ನು ನಮ್ಮ ಮುಂದೆ ಹಾಜರುಪಡಿಸಿರುತ್ತಾನೆ. ಸದರಿ ದ್ವಿಚಕ್ರ ವಾಹನವನ್ನು ಆರೋಪಿ ಠಾಣೆಯ ಮುಂದೆ ನಿಲ್ಲಿಸಿದ್ದು ಅದನ್ನು ಪೊಲೀಸರಿಗೆ ತೋರಿಸಿರುತ್ತಾನೆ.

2. ಆರೋಪಿ ನಮಗೆ ಸದರಿ ಬಟ್ಟೆಗಳನ್ನು ತೋರಿಸಿದ್ದು ಅದು ರಕ್ತದ ಕಲೆಯಾಗಿದ್ದು ನಂತರ ನಾವೆಲ್ಲರು ಒಳಗೆ ಹೋಗಿರುತ್ತೇವೆ. ಪೊಲೀಸರು ನಂತರ ಸದರಿ ಬಟ್ಟೆಗಳನ್ನು ಏನ್ನು ಮಾಡಿರುತ್ತಾರೆ ನಾನು ನೋಡಿಲ್ಲ. ಸಾಕ್ಷಿದಾರರಿಗೆ ಸೀಲು ಮಾಡಿದ ಎರಡು ಬಟ್ಟೆ ಬ್ಯಾಗ್ ಮೇಲೆ ಅಂಟಿಸಿದ ಚೀಟಿಗಳನ್ನು ತೋರಿಸಿದಾಗ ಅವುಗಳ ಮೇಲೆ ತನ್ನ ಸಹಿಗಳು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಮಾನ್ಯ ಪಿಪಿ ಅವರು ಸೀಲಾದ ಬ್ಯಾಗನ್ನು ಓಪನ್ ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

3. ಎರಡು ಸೀಲ್ ಬ್ಯಾಗಳನ್ನು ತೆರೆದ ನ್ಯಾಯಾಲಯದಲ್ಲಿ ಓಪನ್ ಮಾಡಿ ಅವುಗಳಲ್ಲಿ ಇದ್ದ ಬಟ್ಟೆಗಳನ್ನು ಸಾಕ್ಷಿದಾರರಿಗೆ ತೋರಿಸಿದಾಗ ಸಾಕ್ಷಿದಾರರು ಟೀ ಶರ್ಟು ಹಾಗೂ ಪ್ಯಾಂಟನ್ನು ಗುರುತಿಸಿದ್ದು ಅವುಗಳನ್ನು ಮು.ಮಾ.8 ಮತ್ತು 9 ಎಂದು ಗುರುತಿಸಲಾಯಿತು. ಆ ದಿನ ಠಾಣೆಯ ಮುಂದೆ ನೋಡಿದ ಸ್ಕೂಟರ್ ನ್ನು ನಾನು ನೋಡಿದಲ್ಲಿ ಗುರುತಿಸುತ್ತೇನೆ. ದ್ವಿಚಕ್ರ ವಾಹನವನ್ನು ಬಿಡಿಸಿಕೊಂಡ ಬಗ್ಗೆ

ಆರೋಪಿಯನ್ನು ವಿಚಾರಿಸಿದಾಗ ಆರೋಪಿ ನ್ಯಾಯಾಲಯದಲ್ಲಿ ಸದರಿ ವಾಹನ ನನ್ನ ಚಿಕ್ಕಪ್ಪನ ಮಗ ನಾಗರಾಜ್ ಬಿಡಿಸಿಕೊಂಡಿರುವುದಾಗಿ ನ್ಯಾಯಾಲಯದ ಮುಂದೆ ತಿಳಿಸಿರುತ್ತಾರೆ. ಆರೋಪಿ ನ್ಯಾಯಾಲಯದ ಮುಂದೆ ಸದರಿ ವಾಹನವನ್ನು ಗುರುತಿಸುವ ಬಗ್ಗೆ ತನ್ನ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.

4. ನಿಪಿ.4ನ್ನು ಪೊಲೀಸರು ಪೊಲೀಸ್ ಠಾಣೆಯ ಆವರಣದಲ್ಲಿ ರಾತ್ರಿ 7.00 ರಿಂದ 8.00 ಗಂಟೆಯ ಸಮಯದಲ್ಲಿ ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

1. ನಾವು ಪೊಲೀಸ್ ಠಾಣೆಗೆ ಹೋದ ಸಮಯದಲ್ಲಿ ಆರೋಪಿ ಠಾಣೆಯಲ್ಲಿ ಹಾಜರಿದ್ದು ಪೊಲೀಸರ ಮುಂದೆ ತಾನು ದಿನಾಂಕ 24.12.2018 ರಂದು ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ ಚಾ.ಸಾ.2 ರವರ ಮನೆಗೆ ಹೋಗಿ ಸದರಿ ಕೃತ್ಯವನ್ನು ಮಾಡಿರುವುದಾಗಿ ಹೇಳಿ ಕೃತ್ಯಕ್ಕೆ ಬಳಸಿದ ಡಿಯೋ ವಾಹನ ಸಂಖ್ಯೆ ಕೆಎ 04 ಜೆಎಲ್ 0933 ವಾಹನವನ್ನು ಹಾಗೂ ಕೃತ್ಯದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು

ತೋರಿಸುವುದಾಗಿ ನಮ್ಮ ಮುಂದೆ ಹೇಳಿದ್ದರು ಎಂದರೆ ಸರಿ. ನಂತರ ಆರೋಪಿ ನಮ್ಮ ಸಮಕ್ಷಮ ಠಾಣಾ ಮುಂಭಾಗದಲ್ಲಿ ನಿಲಿಸಿದ್ದ ದ್ವಿಚಕ್ರ ವಾಹನವನ್ನು ಹಾಗೂ ವಾಹನದ ಡಿಕ್ಕಿಯಲ್ಲಿ ಇಟ್ಟಿದ್ದ ಮು.ಮಾ.8 ಮತ್ತು 9 ನ್ನು ಪೊಲೀಸರಿಗೆ ತೋರಿಸಿದರು ಎಂದರೆ ಸರಿ. ನಂತರ ನಮ್ಮ ಸಮಕ್ಷಮ ಪೊಲೀಸರು ದ್ವಿಚಕ್ರ ವಾಹನ, ಮು. ಮಾ.8 ಮತ್ತು 9 ನ್ನು ಜಪ್ತ ಪಡಿಸಿರುತ್ತಾರೆ ಎಂದರೆ ಸರಿ. ನಿಪಿ.4 ನ್ನು ಪೊಲೀಸರು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ತೆಗೆದು ನಮ್ಮ ಸಹಿ ಪಡೆದರು ಎಂದರೆ ಸರಿ. ನನ್ನ ಜೊತೆ ವಿಜಯ್ ಕುಮಾರ್ ಎನ್ನುವವರು ಸಾಕ್ಷಿದಾರರು ಇದ್ದರು ಎಂದರೆ ಸಾಕ್ಷಿಯು ಸಾಕ್ಷಿದಾರರು ಇದ್ದು ಅವರ ಹೆಸರು ನನಗೆ ತಿಳಿರುವುದಿಲ್ಲ ಎಂದು ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎ. ಆರ್.ವಕೀಲರಿಂದಃ</u>

1. ಪೋಲೀಸರು ನನಗೆ ಬರುವಂತೆ ನೋಟೀಸನ್ನು ನಮ್ಮ ಮನೆಯ ವಿಳಾಸಕ್ಕೆ ಕಳುಹಿಸಿದ್ದರು. ನಮ್ಮ ಮನೆಯ ವಿಳಾಸವನ್ನು ನಾನು ಮೊದಲೇ ಪೊಲೀಸರಿಗೆ ತಿಳಿಸಿದ್ದೆನು. ನಮ್ಮ ಮನೆಯ ವಿಳಾಸವನ್ನು ನಾನು ಪೊಲೀಸರಿಗೆ ದಿನಾಂಕ 24.12.2018 ರಂದು ಚಾ.ಸಾ.2 ರವರ ಮನೆಗೆ ಬಂದಾಗ ನೀಡಿದ್ದೆನು. ಮಹಜರನ್ನು ಬೆರಳಚ್ಚು ಮಾಡಿರುತ್ತಾರೆ ಎಂದು ಹೇಳಿದ ದಾಖಲೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಬೆರಳಚ್ಚು ವಾಡಿದ ದಾಖಲೆಯನ್ನು ಠಾಣೆಯಲ್ಲಿ ಮಾಡಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.